

ಹೊರಗ ನಿಂತಳಂತ. ಮುಂದ ಅವರ ಮನ್ಯಾಗ ಧನಕನಕ ಸಮೃದ್ಧಿ ಆಯಿತಂತ. ಆ ಮನಿಯವರ ಬಾಳುವೆ ಸುಖದಿಂದ ನಡೀತಂತ.'

'ಮತ್ತ ಮಲ್ಲವ್ವನ ಮನ್ಯಾಗ ಕಾಮಾಕ್ಷಿ ದೀಪ, ಇದ್ದಂಗ ನಮ್ಮ ಅಂತೋನಿ ದಾಸ ಅವರ ಮನ್ಯಾಗೂ ಶಿಲುಬಿ ಇರೂ ಕಾಮಾಕ್ಷಿ ದೀಪ ಐತ್ಯೊ ಇಲ್ಲೋ? ಇದೂ ಹಂಗ ಅನಕೊಂಡ ಸುಮ್ಮನಿದ್ರಾತ ಬಿಡ ನಮ್ಮವ್ವ.' ತಮಿಳುನಾಡಿನಿಂದ ನಲವತ್ತು ವರ್ಷದ ಹಿಂದೆ ಇಲ್ಲಿಗೆ ಬಂದಿದ್ದ ಅಂತೋನಿ ದಾಸ್ ಅವರು, ದೇವರ ಪೀಠದಾಗಿನ ಕಾಮಾಕ್ಷಿ ದೀಪಾನ್ನ ಕುಡುಕ್ಕೈ ವಿಳಕ್ಕು ಅಂತ ಕರಿತಿರ್ತಾರ. ಕುಡುಕ್ಕೈ ವಿಳಕ್ಕು ಅಂದ್ರ ಕುಡುಕಿ ದೀಪ.

***

'ಲಕ್ಷ್ಮಿ ಯಾಕ ಮನೀಗ ಬರಬಾರದು ಏನ್ ತಪ್ಪಾಗ್ತದ?' ಆಟಕ್ಕೆ ಸೇರಲು ತಡವಾಗಿ ಬಂದ, ಶ್ರವಣಬೆಳಗೊಳಕ್ಕೆ ಹೋಗಿದ್ದ ಧರಣೆವ್ವ ಕೇಳಿದಳು.

'ನೋಡ್ರಿಲ್ಲಿ' ತನ್ನ ಪ್ರಶ್ನೆಕ ತಾನ ಉತ್ತರಿಸುವ ಹಂಗ ಮಾತು ಮುಂದುವರಿಸಿದ ಅವಳು, 'ಗೋಧೂಳಿ ವ್ಯಾಳ್ಯಾ ಅಂದ್ರ ಲಕ್ಷ್ಮವ್ವ ಮನೆಯೊಳಗ ಬರೂ ಹೊತ್ತವಾ' ಎಂದಳು.

'ನಮ್ಮವ್ವನೂ ಅದನ್ನ ಹೇಳ್ತಾಳ, ಸಂಜಿ ಮುಂದ, ಕತ್ತಲಾದ ಮ್ಯಾಲ ಕಸ ಗುಡುಸಬಾರದು. ಲಕ್ಷ್ಮಿ ಮನಿಗೆ ಬರೂ ಮುಂದ ಹಂಗ ಮಾಡಬಾರದು' ಅಂತಂದ ಮಾತ ಆರಂಭಿಸಿದ ಪದ್ಮಾ, 'ನಮ್ಮಣ್ಣ ಕಿರಣಣ್ಣ ಅದಕ್ಕ ಬ್ಯಾರೇನ ಕಾರಣ ಹೇಳ್ತಾನ' ಅಂದಳು.

'ಹೌದ, ಏನವಾ ಅದು?'' ರೋಜಾ ಮತ್ತು ಜುಬೇದಾ ಬಾನು ಒಮ್ಮೆಲೆ ಕೇಳಿದರು.

'ನಮ್ಮಣ್ಣ ಹೇಳ್ತಾನ, ಹಿಂದಿನ ಕಾಲದಾಗ, ರಾತ್ರಿ ಹಗಲಿನಂಗ ಬೆಳಕ ಮಾಡೂ ಕರಂಟ ಇಲ್ಲದ ಕಾಲದಾಗ, ಕಂದೀಲ ಇದ್ದಾಗ, ಆ ಮಾತಿಗೆ ಭಾಳ ಅರ್ಥ ಇತ್ತು. ಸುಮ್ಮನ ಹೇಳಿದರ ಮಂದಿ ಮಾತ ಕೇಳುದಿಲ್ಲ ಅಂತ ಹಿರ್ಯಾರು, ದೇವರ ಹೆಸರ ತಗೊಂಡ ಎಲ್ಲಾ ಮಾಡ್ತಾರು.'

'ಏನ್ ಹೇಳಾಕ್ಹತ್ತೀಯ ನೀ?' ಜುಬೇದಾ ಬಾನು ಕೇಳಿದಳು.

'ಮೂರು ಸಂಜಿಲೇ ಮನಿ ಕಸಾ ಗುಡಿಸಿ ಹೊರಗ ಹಾಕಬಾರದು, ಅಂದ್ರ ಸೂರ್ಯ ಮುಳಗಿದ ಮ್ಯಾಲೆ ಮನಿ ಕಸಾ ಹೊಡದ ಮರದಾಗ ಕಸಾ ತುಂಬಿ ಹೊರಗ ಹಾಕಬಾರದು ಅಂತ ಯಾಕ ಅಂತಾರು ಹಿರ್ಯಾರು? ಅಪ್ಪಿತಪ್ಪಿ ಮನ್ಯಾನ ಕಿಮ್ಮತ್ತಿನ ಸಾಮಾನುಗಳು ಅಂದ್ರ ಕಿವಿ ಜುಮುಕಿ, ಕೈ ಮತ್ತ ಕಾಲ ಬೆರಳಗಳಿಂದ ಉಂಗುರಾ, ಮೂಗಿನಲ್ಲಿರೂ ಮೂಗಬಟ್ಟಿನಂಥಾ ಬೆಳ್ಳಿ ಬಂಗಾರದ ಸಾಮಾನು, ಮಕ್ಕಳ ಕಾಲ ಗೆಜ್ಜಿ ಕಸದ ಜೋಡಿ ಹೊರಗ ಹೋಗಬಾರದ ಅನ್ನು ವಿಚಾರದಿಂದ ಹೇಳತಿದ್ದರಂತ.'

'ಹೌದ, ನಿಮ್ಮ ಅಣ್ಣ ಹೇಳೂದೂ ಖರೆ ಐತಿ ನೋಡವಾ', ಜುಬೇದಾ ಬಾನು, ಪದ್ಮಳ ಮಾತಿಗೆ ಮೆಚ್ಚುಗೆ ಸೂಚಿಸಿದಳು.

'ನಮ್ಮ ದರ್ಗಾದೊಳಗ ದೆವ್ವ ಬಿಡಸಾವರು ಕಸಬರಿಗಿ ಅಂಥಾದ್ದ ನವಿಲಗಿರಿ ಕೈಯಾಗ ಹಿಡಕೊಂಡ ತಲಿಗೆ ಮೈಗೆ ಮುಟ್ಟಸೂದನ್ನ ನಾ ನೋಡೀನಿ', ಜುಬೇದಾ ಬಾನು ತಾನು ದರ್ಗಾದಲ್ಲಿ ಕಂಡ ಸಂಗತಿಯನ್ನ ಅರುಹಿದಳು.

***

ಅವರ ಜೋಡಿ ಆಟಕ್ಕ ಸೇರಾಕ ಓಡಿ ಬರತ್ತಿದ್ದ ಮಲ್ಲವ್ವ ಮನೆಯ ಹೊಸ್ತಿಲ ಹಿಂದ ಬಾಗಲ ಸಂದಿಯಿಂದ ಜಾರಿ ಕೆಳಗ ಕಾಲಿಗೆ ಅಡ್ಡ ಬಿದ್ದ ಕಸಬರಿಗಿನ್ನ ತುಳದ ಹಂಗ ಬರಾಕ್ಹತ್ತಿದ್ದಳು. ಕಾಯಿಪಲ್ಲೆ ಸೋಸಗೋತ ಕಟ್ಟಿ ಮ್ಯಾಲ ಕೂತಿದ್ದ ಅವರವ್ವ ತಾರಕ್ಕ, 'ಏ ಖೋಡಿ. ಅಷ್ಟ್ಯಾಕ ಅವಸರ ಮಾಡ್ತಿ? ಕಸಬರಿಗೆಗೆ ನಮಸ್ಕಾರ ಮಾಡಿ, ಅದನ್ನ ಎತ್ತಿ ಬಾಗಲ ಹಿಂದ ಇಟ್ಟ ಹೋಗ. ಏನ್ ಅವಸರಗೇಡಿ ಅದೀಯ ನಮ್ಮವ್ವ' ಎಂದು ಗೊಣಗಿದ್ದು ಕೇಳಿಸಿತು.

ಆಟ ಆಡತಿದ್ದವರ ಲಕ್ಷ್ಯ ಮಲ್ಲವ್ವನ ಕಡೆ ಹೋಯಿತು. ಅವರವ್ವ ಯಾಕ ಬಯ್ಯಾಕಹತ್ಯಾಳ ಅಂತ ಆಕಿ ಮನಿ ಕಡೆ ಹುಡಿಗ್ಯಾರು ಓಡಿ ಹೋದರು. ಅಲ್ಲಿ ನೋಡಿದರ, ಮಲ್ಲವ್ವ, ಕಾಲ ಸನೇಕ ಇದ್ದ ಕಸಬರಿಗಿಗೆ ಬಲಗೈ ಮುಂಗೈ ಮುಟ್ಟಿಸಿ ಹಣಿಗೆ ಹಚ್ಚಿಕೊಂಡ ನಮಸ್ಕಾರ ಮಾಡಿ, ಅದನ್ನು ಎತ್ತಿ ತಲಬಾಗಲ ಹಿಂದ ಸಂದ್ಯಾಗ ಇಡೂದು ಕಾಣಿಸಿತು.

'ವೈನಿ, ಏನಾತ್ರಿ ಮಲ್ಲವ್ವ ಏನ್ ಮಾಡಿದಳ್ರಿ?' ಹುಡುಗರು ಕೇಳಿದರು.

'ನಿಮ್ಮ ಆಟಕ್ಕಿಷ್ಟ ಬೆಂಕಿ ಹಚ್ಚಲಿ, ಅವಸರದಾಗ ನಮ್ಮ ಮಲ್ಲವ್ವ ಕಸಬರಿಗೆ ತುಳದ ಓಡಿ ಬರಾಕ್ಹತ್ತಿದ್ದಳು. ಅದಕ್ಕ ಬೈಸಿಕೊಂಡಳು.'

'ಕಸಬರಿಗಿ ತುಳದರ ಏನಾತ್ರಿ? ನಾವು ಅಪ್ಪಿತಪ್ಪಿ ಯಾರದರ ಕಾಲ ತುಳದರ ಕೈಲಿಂದ ಅವರ ಮೈ ಮುಟ್ಟಿ ನಮಸ್ಕಾರ ಮಾಡ್ದಂಗ, ಮಲ್ಲವ್ವ ಈಗ ಮಾಡೂದ ನೋಡಿದೀವಿ ನಾವು' ಜುಬೇದಾ ಬಾನು ಅಂದಳು.

'ಬಾನು ಬಾಳ, ಕಸಬರಿಗಿ ಅಂದ್ರ ಹಂಗ ಹಗರ ತೊಗೋಬಾರದವಾ. ಕಸಬರಿಗಿ ಅಂದ್ರ ದೇವರು ಲಕುಮವ್ವಳ ಪ್ರತಿರೂಪ. ಲಕುಮವ್ವ ಸಂಪತ್ತಿನ ದೇವರು. ಕಸಬರಗಿ ರೂಪದಾಗ ಆಕಿ ಮನ್ಯಾಗ ಇರೂ ಕಸ, ದೂಳು, ಮಣ್ಣು ಹೊರಗ ಹಾಕತಾಳ. ಅದಕ್ಕ ಅಪಮಾನ ಮಾಡಬಾರದ. ಅದಕ್ಕ ಅದನ್ನ ಅಪ್ಪಿತಪ್ಪಿ ತುಳದಾಗ, ಕಸಬರಿಗಿಗೆ ಬೆರಳ ಮುಟ್ಟಿಸಿ ಅವನ್ನ ಹಣೆಗೆ ಹಚ್ಚಕೊಂಡ ನಮಸ್ಕಾರ ಮಾಡಿ ಮನಸ್ಸಿನ್ಯಾಗ ತಪ್ಪಾಯಿತು ನಮ್ಮವ್ವ, ನಮಗ ಕ್ಷಮಾ ಮಾಡು ಅಂತ ಕೇಳಕೊಳ್ಳೂ ಪದ್ಧತಿ ಅದ. ಮಲ್ಲವ್ವ ಈಗ, ಅದನ್ನ ಮಾಡಿದ್ದನ್ನ ನೀವು ನೋಡಿದಿರಿ.'

'ಕಸಬರಿಗ್ಯಾಗೂ ಲಕ್ಷ್ಮಿ ದೇವರ ಇರ್ತಾರ?' ಜುಬೇದಾ ಬಾನು ಅಚ್ಚರಿ ವ್ಯಕ್ತಪಡಿಸಿದಳು.

'ಹೌದ ನನ ಬಾಳ, ದಿನಾ ಮುಂಜಾನೆದ್ದ ಮನಿ ಮುಂದಿನ ಅಂಗಳದಾನ ಕಸ ಗುಡುಸೂದು ಆಯಾ ಮನಿ ಯಜಮಾನಿ ಮೊದಲ ಕೆಲಸಾನ ಅದು. ಆಮ್ಯಾಲ ಅಂಗಳಕ ನೀರ ಹಾಕಿ ಇಲ್ಲ ಅಂದ್ರ ಸಗಣಿ ಸಾರಸಿ ರಂಗೋಲಿ ಹಾಕೂದು ಆಕಿ ಕೆಲಸ ಆಗಿರ್ತದ ಗೊತ್ತೇನ? ಕಸಬರಿಗ್ಯಾಗೂ ಲಕುಮವ್ವ ಇರ್ತಾಳ ತಿಳಕೋರಿ.'

'ವೈನಿ, ನಮ್ಮ ಮುನಿಗಳು ಹೊರಗ ಹೊಂಟರಂದ್ರ ಅವರ ಕೈಯಾಗ, ಇಲ್ಲಾ ಅವರ ಜೊಡಿ ಹೊಂಟವರ ಕೈಯಾಗ ಸಣ್ಣ ಕಸಬರಿಗೆ ಇದ ಇರ್ತದ.' ಧರಣೆವ್ವ ಹೇಳಿದಳು.

'ಅವರ ಕೈಯಾಗ ಕಸಬರಿಗಿ ಯಾಕ ಇರ್ತದ?' ರೋಜಾ ಕೇಳಿದಳು.

'ಅವರು ಹೆಜ್ಜಿ ಇಡೂ ಮುಂದ ಕಸಾ ಗುಡಿಸಿಗೋತ ಹೋಗ್ತಾರ. ತಮಗ ಅರಿವಿಗೆ ಬರದನ ಇರವಿ, ಇಲ್ಲಾ ಅಂಥಾ ಕ್ರಿಮಿ ಕೀಟಗಳನ್ನ ತುಳಿಬಾರದು, ಅವಕ್ಕ ಹಿಂಸಾ ಮಾಡಬಾರದು ಅಂತ ಹಂಗ ಮಾಡ್ತಾರ.'

***

ಒಳಗ ಕೂತ ಇವರ ಮಾತ ಕೇಳಿಸಿಕೊಳ್ತಿದ್ದ ಮಲ್ಲವ್ವನ ಅಪ್ಪ ಹೊರಗ ಬಂದ ಕಟ್ಟಿ ಮ್ಯಾಲ ಕುಂತ ಅವರ ಜೋಡಿ ಮಾತ ಹಚ್ಚಿದ.

'ಏನ ನಡದದ ಇಲ್ಲಿ? ಆಡೂದ ಬಿಟ್ಟ ಇಲ್ಲೇನ ಮಾಡಕ್ಹತ್ತಾರ ಹುಡುಗರು?'

'ಕಾಕಾರ, ಕಸಬರಿಗಿ ಅಂದ್ರ ಲಕ್ಷ್ಮಿ ದೇವರು, ಅದಕ್ಕ ಗೌರವ ಕೊಡಬೇಕು ಅಂತ ಮಾತ ನಡದಿದ್ದವು.'

'ನಿಮಗ ಗೊತ್ತೇನ? ಉತ್ತರ ಭಾರತದಾಗ ಕಸಬರಿಗೆ ಹಿಡಕೊಂಡ ದೇವಿ ಅದಾಳ. ಆಕಿನ್ನ ಶೀತಲ ಮಾತಾ ಅಂತ ಕರಿತಾರ. ಆಕಿನ್ನ ಬೌದ್ಧರು ಮತ್ತು ಬುಡಕಟ್ಟಿನ ಮಂದೀನು ಬಾಳ